**ದಿನಾಂಕಃ 18-02-2020 ಓ ಎಸ್ ನಂ.68 /2017 (ಪಿ.ಡಬ್ಲ್ಯೂ 1)**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ಶ್ರೀ ಪಿ ಆರ್ ಸಿ ವಕೀಲರಿಂದಃ**

**1] ನಾನು ಅನಕ್ಷರಸ್ಥೆ. ನನ್ನ ಸಹೋದರಿಯರ ಪೈಕಿ ಗಂಗವ್ವ ಮಾತ್ರ ಶಿಕ್ಷಣ ಪಡೆದಿದ್ದರು. ಆದರೆ ಅವರು ಈಗ ಜೀವಂತ ಇಲ್ಲ. ನಾನು ಮದುವೆಯಾಗಿ 34 ವರ್ಷಕಳೆಯಿತು ಮದುವೆ ಕಾಲದಿಂದಲೂ ನಾನು ಕೋಚರಿ ಗ್ರಾಮದಲ್ಲಿ ನೆಲಸಿದ್ದೇನೆ. 2 ನೇ ವಾದಿ ಮದುವೆಯಾಗಿಲ್ಲ. 3 ನೇ ವಾದಿ ಮದುವೆಯಾಗಿ 30 ವರ್ಷ ಕಳೆಯಿತು. 3 ನೇ ವಾದಿ ಮಲ್ಲಾಪೂರ ಪಿ ಜಿ ಗ್ರಾಮದಲ್ಲಿ ಇರುತ್ತಾರೆ. ಕೋಚರಿ ಗ್ರಾಮದಿಂದ ಗುಡಸ ಗ್ರಾಮ 20-25 ಕಿ ಮೀ ಅಂತರದಲ್ಲಿ ಇವೆ ಎಂದರೆ ಸರಿ. ಈ ದಾವೆಯನ್ನು ಒಟ್ಟು 24 ಜಮೀನುಗಳ ಕುರಿತು ಸಲ್ಲಿಸಿದ್ದೇವೆ.**

**2] ಕುಟುಂಬದ ಮೂಲ ಪುರುಷ ಈರಪ್ಪ ಇವರ ತಂದೆಯ ಹೆಸರು ಗೊತ್ತಿಲ್ಲ. ಈರಪ್ಪ ಇವರ ಹೆಂಡತಿ ಹೆಸರು ಅವಕ್ಕ ಎಂದರೆ ಸರಿ. ಸದರಿ ಈರಪ್ಪ ಮತ್ತು ಅವನ ಹೆಂಡತಿ ಅವಕ್ಕ ಮರಣ ಹೊಂದಿ ಎಷ್ಟು ವರ್ಷ ಕಳೆಯಿತು ಎಂದು ನನಗೆ ಗೊತ್ತಿಲ್ಲ. ಗುಡಸ ಗ್ರಾಮದಲ್ಲಿ ಅಮ್ಮಣಗಿ ಮನೆತನ ದೊಡ್ಡ ಕುಟುಂಬ ಎಂದರೆ ಸರಿ. ಈರಪ್ಪ ಇವರ ತಂದೆ ಮುತ್ತ್ಯ ಇವರಿಂದ ಬಂದ ಒಟ್ಟು ಐದು ಮನೆಗಳು ಗುಡಸ ಗ್ರಾಮದಲ್ಲಿ ಇದೆ ಎಂದರೆ ಸಾಕ್ಷಿಯು ಮೂರು ಮನೆಗಳು ಇವೆ ಎಂದು ಹೇಳುತ್ತಾರೆ . ಸದರಿ ಮೂರು ಮನೆಗಳು ನಮ್ಮ ಕುಟುಂಬದ ಮೂಲ ಪುರುಷರಿಂದ ಬಂದದ್ದು ಎಂದರೆ ಸರಿ .ಮೂಲ ಪುರುಷ ಈರಪ್ಪ ಇತನಿಗೆ ಗೋಳಪ್ಪ , ರಾಮಪ್ಪ , ಮಲ್ಲಪ್ಪ , ಈಶ್ವರ ಹಾಗೂ ಅಣ್ಣಪ್ಪ ಎನ್ನುವ ಮಕ್ಕಳು ಎಂದರೆ ಸರಿ. ಈರಪ್ಪ ಇವರ ಮಗಳ ಹೆಸರು ತಾಯವ್ವ. ಸದರಿ ತಾಯವ್ವ ಈಗ ಮರಣ ಹೊಂದಿದ್ದು ಅವರ ವಾರಸುದಾರರು ಎಂದರೆ ಬಸಪ್ಪ ಮತ್ತು ಮಾರುತಿ. ಸದರಿ ಬಸಪ್ಪ ಮತ್ತು ಮಾರುತಿ ಅವರು ಮರಣ ಹೊಂದಿದ್ದಾರೆ . ಬಸಪ್ಪನ ವಾರಸುದಾರೆಂದರೆ ಮಹಾದೇವ ಹಾಗೂ ಅಜೀತ ಹಾಗೂ ಹೆಣ್ಣು ಮಗಳು ಬಸವ್ವ. ಸದರಿಯವರ ವಿರುದ್ಧ ಈ ದಾವೆ ಹಾಕಿಲ್ಲ ಎಂದರೆ ಸರಿ.**

**3] ಗುಡಸ ಗ್ರಾಮದಲ್ಲಿ ನನ್ನ ಅಜ್ಜ ಗೂಳಪ್ಪ ಇವರ ಹೆಸರಿಗೆ ವಿ ಪಿ ಸಿ ನಂಬರ 57 ಮನೆ ಎಂದರೆ ಸರಿ. ಗೂಳಪ್ಪ ಇವರು ನಾನು ಹುಟ್ಟುವ ಮೊದಲೇ ಮರಣ ಹೊಂದಿದ್ದಾರೆ. ಗೂಳಪ್ಪ ಇತನಿಗೆ ಬಾಳಪ್ಪ ಎನ್ನುವ ಗಂಡು ಮಗ ಮತ್ತು ಬಸವ್ವ ಎನ್ನುವ ಹೆಣ್ಣು ಮಗಳು. ದುಂಡಪ್ಪ ಮತ್ತು ಬಸಪ್ಪ ಸದರಿ ಬಸವ್ವ ಇವರ ಮಕ್ಕಳು. ಸದರಿಯವರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.**

**4] ನನ್ನ ತಂದೆ ಬಾಳಪ್ಪ ಇವರ ಹೆಸರಿನಲ್ಲಿ ಗುಡಸ ಗ್ರಾಮದ ವಿ ಪಿ ಸಿ ನಂಬರ 164 ಮನೆ ಇದೆ ಎಂದರೆ ಸರಿ. ಈರಪ್ಪನ ಮಗ ರಾಮಪ್ಪನ ಹೆಸರಿನಲ್ಲಿ ವಿ ಪಿ ಸಿ**

ನಂಬರ 58 ಮನೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಐದು ಜನ ಮಕ್ಕಳು ಎಂದರೆ ಸರಿ. ಬಸಗೌಡಾ ಇವರ ಮಕ್ಕಳು ಹೆಸರಿಗೆ ವಿ ಪಿ ಸಿ ನಂಬರ 58 ಮನೆ ಇದೆ ಎಂದರೆ ಸರಿ .

5] ಪ್ರತಿವಾದಿ ನಂ.2 ಮತ್ತು 3 ರವರು ಮಲ್ಲಪ್ಪನ ಮಕ್ಕಳು ಎಂದರೆ ಸರಿ. 3 ನೇ ಪ್ರತಿವಾದಿ ಹೆಸರಿನಲ್ಲಿ ವಿ ಪಿ ಸಿ ನಂಬರ 128 ಮನೆ ಇದೆ ಎಂದರೆ ಸರಿ. 9 ನೇ ಪ್ರತಿವಾದಿ ಹೆಸರಿನಲ್ಲಿ ಗುಡಸ ಗ್ರಾಮದಲ್ಲಿ ವಿ ಪಿ ಸಿ ನಂಬರ 165 ಮನೆ ಇದೆ ಎಂದರೆ ಸರಿ. ಸದರಿ ಸ್ವತ್ತುಗಳು ಈ ದಾವೆಯಲ್ಲಿ ಒಳಗೊಂಡಿಲ್ಲ ಎಂದರೆ ಸರಿ.

6] ದಾವೆಯ ಜಮೀನುಗಳು ಹೊಳೆಗೆ ಹೊಂದಿಕೊಂಡಿವೆ ಎಂದರೆ ಸರಿ , ಸದರಿ ಜಮೀನುಗಳಲ್ಲಿ ಕಬ್ಬು , ಗೋವಿನ ಜೋಳ ಬೆಳೆಯಲಾಗುತ್ತದೆ ಎಂದರೆ ಸರಿ. ಈರಪ್ಪ ಇವರ ಮರಣದ ನಂತರ ಅವರ ಐದು ಜನ ಮಕ್ಕಳು ತಮ್ಮ ಮಕ್ಕಳು ಶಿಕ್ಷಣವನ್ನು ಪ್ರತ್ಯಕವಾಗಿ ಕೊಡಿಸಿದ್ದು ಆ ಪ್ರಕಾರ ಪ್ರತ್ಯಕವಾಗಿ ವಾಸು ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ ಸಾಕ್ಷಿಯು ಎಲ್ಲರೂ ಕೂಡಿಯೇ ಇದ್ದೇವೆ ಎಂದು ಹೇಳುತ್ತಾರೆ. ನನ್ನ ಪ್ರಕಾರ ಈರಪ್ಪನ ಐದು ಜನ ಮಕ್ಕಳಿಗೆ ತಲಾ ಐದು ಎಕರೆ ಜಮೀನು ಬರುತ್ತದೆ. ಉತಾರಗಳಲ್ಲಿ ಎಲ್ಲರ ಹೆಸರು ಪ್ರತ್ಯೆಕವಾಗಿ ನಮೂದುಇದೆ ಎಂದರೆ ಸರಿಯಲ್ಲ. ಬ್ಲಾಕ ನಂಬರ 586 ಕ್ಷೇತ್ರ 6 ಗುಂಟೆ 12 ಅಣೆ ಹೊಳೆಗೆ ಹೊಂದಿಕೊಂಡಿದೆ ಎಂದರೆ ಸರಿ. ಸದರಿ ಜಮೀನಿನ ಕುರಿತು ಬಾಳಪ್ಪ ಮತ್ತು ಬಸವಣ್ಣಿ ನಡುವೆ ಒಂದು ಕಾಗದಯಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಉತಾರ ನೋಡಿದ್ದೇನೆ. ಅದರಲ್ಲಿ ಬಸವಣ್ಣಿ ಇವರ ಹೆಸರು ಕ್ಷೇತ್ರ 6 ಗುಂಟೆ 12 ಅಣೆ ಹೆಸರು ಹಚ್ಚಿ ಕೊಂಡಿದ್ದಾನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ಹೆಸರು ತಪ್ಪಾಗಿ ಉತಾರಿನಲ್ಲಿ ದಾಖಲಾಗಿದೆ ಎಂದು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿಲ್ಲ. ಸದರಿ ಜಮೀನು ವಾಡಾವ ಯಾಗಿದೆ ಎಂದರೆ ಸರಿ. ಸದರಿ ಜಮೀನಿಗೆ ಹೊಂದಿಕೊಂಡು 2 ಎಕರೆಕ್ಕಿಂತ ಕ್ಷೇತ್ರ ಬೆಳೆದಿದೆ ಎಂದರೆ ಸರಿ. ಸದರಿ ಜಮೀನಿನ ಕುರಿತು ನನ್ನ ಹಾಗೂ 9 ನೇ ಪ್ರತಿವಾದಿಯ ನಡುವೆ ತಕರಾರು ಇದ್ದು ಆ ಕಾರಣಕ್ಕಾಗಿ ನಾನು ಪೊಲೀಸ ಠಾಣೆ ಹೋಗಿದ್ದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಕಬ್ಬು ಮತ್ತು ಗೋವಿನ ಜೋಳ ಬೆಳೆಯಲಾಗುತ್ತದೆ ಎಂದರೆ ಸರಿ. ವಾಡಾವ ಜಮೀನಿನಲ್ಲಿ ಬೆಳೆದ ಕಬ್ಬು ನನ್ನ ಹೆಸರಿನಲ್ಲಿ ಕಾರ್ಖಾನೆಗೆ ಹೋಗಿಲ್ಲ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಹೋಗಿದೆ ಎಂದು ಸ್ವತಃ ಹೇಳುತ್ತಾರೆ. ನನ್ನ ತಂದೆ ಜೀವಂತ ಇರುವಾಗ ಅವನ ಹೆಸರಿನಲ್ಲಿ ಕಬ್ಬು ಕಾರ್ಖಾನೆಗೆ ಹೋಗಿದೆ. ವಾಡಾವ ಜಮೀನಾಗಿ 10-12 ವರ್ಷವಾಯಿತು ಎಂದರೆ ಸಾಕ್ಷಿಯು 5-6 ವರ್ಷವಾಯಿತು ಎಂದು ಹೇಳುತ್ತಾರೆ. ವಾಡಾವ ಜಮೀನಿಂದ ಬೆಳೆದ ಕಬ್ಬು 9 ನೇ ಪ್ರತಿವಾದಿ ಹೆಸರಿಗೆ ಕಾರ್ಖಾನೆಗೆ ಹೋಗುತ್ತದೆ ಎಂದರೆ ಸರಿ. ಕಬ್ಬಿನ ಬಾಬತ್ತು ಹಣವನ್ನು 9 ನೇ ಪ್ರತಿವಾದಿ ಪಡೆದಿದ್ದಾನೆ ಎಂದರೆ ಸರಿ.

7] ಬಾಳಪ್ಪ ಗೂಳಪ್ಪ ಅಮ್ಮಣಗಿ ಎನ್ನುವವರು ನನ್ನ ತಂದೆ. ಸದರಿ ಹೆಸರಿನ ವ್ಯಕ್ತಿ ಗುಡಸ ಗ್ರಾಮದಲ್ಲಿ ನಮ್ಮ ತಂದೆ ಮಾತ್ರ ಎಂದರೆ ಸರಿ. ಕೆಂಪಣ್ಣಿ ಗುರಲಿಂಗಪ್ಪ ಕುರಬೇಟ

, ಕೆಂಪಣ್ಣ ಬಸವಣೆಪ್ಪ ನೇರ್ಲಿ ಎನ್ನುವವರು ಗುಡಸ ಗ್ರಾಮದಲ್ಲಿ ಇದ್ದಾರೆ ಎಂದರೆ ಸರಿ. ನನ್ನ ತಂದೆಯುವರು ಬ್ಲಾಕ ನಂಬರ 419 ಜಮೀನನ್ನು ಕೆಂಪಣ್ಣ ಗುರಲಿಂಗಪ್ಪ ಕುರಬೇಟ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಬ್ಲಾಕ ನಂಬರ 419 ರ ಜಮೀನು ಕ್ಷೇತ್ರ 3 ಎಕರೆ 32 ಗುಂಟೆ ನಮ್ಮ ಅಜ್ಜನಿಂದ ಬಂದಿತ್ತು ಎಂದರೆ ಸರಿ. ಸದರಿ ಜಮೀನಿನ ಉತಾರಿನಲ್ಲಿ ಪ್ರಸ್ತುತ ಕೆಂಪಣ್ಣ ಗುರುಲಿಂಗಪ್ಪ ಕುರಬೇಟ ಎನ್ನುವವರ ಹೆಸರು ನಮುದಾಗಿರುವುದು ನನಗೆ ಗೊತ್ತಿಲ್ಲ. ರಿ ಸ ನಂಬರ 173 ಕ್ಷೇತ್ರ 12 ಗುಂಟೆ ಜಮೀನು ಪ್ರಸ್ತುತ ಯಾರು ಹೆಸರು ನಮೂದು ಇದೆ ಎಂದು ನನಗೆ ಗೊತ್ತಿಲ್ಲ. ಅದರ ದಾಖಲೆಗಳನ್ನು ಚೌಕಾಶಿ ಮಾಡಿಲ್ಲ. ಸದರಿ ಜಮೀನು 9 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ.

8] ಮೊದಲು ಪಡಿತರ ಚೀಟಿ ಮತ್ತು ಮತದಾರರ ಚೀಟಿ ಕೂಡಿಯೇ ಇದ್ದವು. ಈ ಕುರಿತಾದ ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಬಲ್ಲೆ. ದಾವಾ ಜಮೀನುಗಳು ಕಳೆದ 20 ವರ್ಷಗಳಿಂದ ಸಾಕಷ್ಟು ಸುದಾರಣೆಯಾಗಿದೆ ಎಂದರೆ ಸರಿ. 6 ಗುಂಟೆ 12 ಆಣೆ 8 ಪೈಸೆ ಹಾಗೂ 12 ಗುಂಟೆ ಜಮೀನು ಸಾಕಷ್ಟು ಸುದಾರಣೆಯಾಗಿರುವ ಕಾರಣ ನಾನು ಈಗ ಅನಾವಷ್ಯವಾಗಿ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪುರುಷ ಈರಪ್ಪ ಇವರ ಐದು ಜನ ಮಕ್ಕಳು ಅನ್ಯೂನ್ಯವಾಗಿ ಇದ್ದರು ಎಂದರೆ ಸರಿ. ಈರಪ್ಪ ಇವರ ಮರಣದ ನಂತರ ಅವರ ಐದು ಜನ ಮಕ್ಕಳು ವಾಟ್ನಿ ಮಾಡಿಕೊಂಡು ಪ್ರ ತ್ಯಕವಾಗಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಸಹೋದರ ಸಹೋದರಿಯರ ಕುಟುಂಬಕ್ಕೆ ದನಕರುಗಳು ಇವೆ. ದಾವಾ ಜಮೀನುಗಳಿಗೆ ಇಲೇಟ್ರಿಕಲ ಪಂಪ ಸಟ ಅಳವಡಿಸಿ ಪೈಪಲೈನ ಹಾಕಿದ್ದಾರೆ ಎಂದರೆ ಸರಿ. ಪಂಪ ಸಟ್ಟಗಳು ಈರಪ್ಪನ ಐದು ಜನ ಮಕ್ಕಳ ಹೆಸರಿಗೆ ಪ್ರತ್ಯೇಕವಾಗಿ ಇದ್ದಾವೆ ಎಂದರೆ ಸರಿ. ನಾನು ಸಹ ದನಕರುಗಳನ್ನು ಹೊಂದಿದ್ದೇನೆ. ಸುದಾರಣೆ ಆಗಿರುವ ಜಮೀನುಗಳಲ್ಲಿ ನಾನು ಹಿಸ್ಸೆ ಹೊಂದದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ ನಂ. 4 ರಿಂದ 7 ರ ಪರವಾಗಿ ಶ್ರೀ ಎ ಎಮ್ ಎಚ್ ವಕೀಲರಿಂದಃ

9] ನನ್ನ ತಂದೆ ಬಾಳಪ್ಪ ಮರಣ ಹೊಂದಿ ಈಗ ಆರು ವರ್ಷ ಕಳೆಯಿತು. ಬಾಳಪ್ಪ ಇವರಿಗೆ ಇಬ್ಬರು ಹೆಂಡತಿಯರು ಅವರೆಂದರೆ ತಾನಕ್ಕ ಮತ್ತು ಶೋಭಾ. ತಾನಕ್ಕ ಮರಣ ಹೊಂದಿ 22 ವರ್ಷ ಕಳೆಯಿತು. ತಾನಕ್ಕ ಮರಣ ಹೊಂದಿದ ನಂತರ ಬಾಳಪ್ಪ ಇವರು ವಾದಿ ನಂ. 6 ನ್ನು ಮದುವೆಯಾಗಿದ್ದಾರೆ. ಬಾಳಪ್ಪ ಮರಣ ಹೊಂದುವ ಕಾಲಕ್ಕೆ ದಾವಾ ಆಸ್ತಿಗಳು ಅವರ ಹೆಸರಿನಲ್ಲಿ ಇದ್ದವು. ಬಾಳಪ್ಪನ ಮರಣದ ನಂತರ ವಾರಸ ಪ್ರಕಾರ ನನ್ನ ಹೆಸರು ದಾಖಲಿಸಲು ಅರ್ಜಿ ಕೊಟ್ಟಿಲ್ಲ. ನನ್ನ ತಂದೆಯ ಮರಣದ ಕಾಲಕ್ಕೆ ದಾವಾದ ಎಲ್ಲಾ ಆಸ್ತಿಗಳು ಅವರ ಹೆಸರಿನಲ್ಲಿ ಇರಲಿಲ್ಲ ಆದರೂ ಸಹ ಅವನ ಹೆಸರಿನಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ

ಉತಾರಗಳಲ್ಲಿ ಕುಟುಂಬದ ಮೂಲ ಪುರುಷ ಈರಪ್ಪ ಇವರ ಐದು ಜನ ಮಕ್ಕಳು ಹೆಸರು ದಾಖಲಿದೆ. ಸದರಿ ಐದು ಜನರನ್ನು ಹೊರತು ಪಡಿಸಿ ಬೇರೆಯವರು ಹೆಸರು ಉತಾರಿನಲ್ಲಿ ದಾಖಲಾಗಿಲ್ಲ.

**10]** ಈರಪ್ಪ ಇವರಿಂದ ಬಂದ ಜಮೀನುಗಳನ್ನು ಹೊರತು ಪಡಿಸಿ ಬಾಳಪ್ಪ ಇವರು ಇತರೇ ಮೂಲಗಳಿಂದ ಸಂಪಾದಿಸಿದ ಆಸ್ತಿಗಳು ಸೇರಿಸಿಲ್ಲ. ಗೋಳಪ್ಪ ಮತ್ತು ಅವರ ನಾಲ್ಕು ಜನ ಸಹೋದರರಿಗೆ ಭೂ ನ್ಯಾಯ ಮಂಡಳಿಯಿಂದ ಪ್ರತ್ಯಕವಾಗಿ ರಿ ಸ ನಂಬರ **583/1 , 583/2 , 583/3, 583/4** ಮತ್ತು **586** ಜಮೀನುಗಳು ಮಂಜೂರಾಗಿವೆ ಎಂದರೆ ಸರಿ. ಹಾಗೇ ಮಂಜೂರು ಮಾಡಿದ ಬಗ್ಗೆ ಸರಕಾರಕ್ಕೆ ಪಾವತಿಸಬೇಕಾಗಿರುವ ಹಣವನ್ನು ಐದು ಜನ ಪಾವತಿ ಮಾಡಿದ್ದಾರೆ ಎಂದರೆ ಸರಿ. **30** ವರ್ಷಗಳ ಹಿಂದೆ ಈ ಐದು ಜನ ತಮಗೆ ಮಂಜೂರಾದ ಜಮೀನುಗಳನ್ನು ಮಾರಾಟ ಮಾಡಲು ಸರಕಾದರು ಪರವಾಣಿಗೆ ಕೋರಿದ್ದರು ಎಂದರೆ ಸರಿಯಲ್ಲ. ವಿಶೇಷ ತಹಶೀಲ್ದಾರ ಭೂ ನ್ಯಾಯ ಮಂಡಳಿ ಇವರು ಸದರಿ ಅರ್ಜಿ ಮೇರೆಗೆ ಜಮೀಗಳನ್ನು ಪರಬಾರೆ ಮಾಡಲು ಅನುಮತಿ ಕೊಟ್ಟಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಹಾಗೇ ಮಂಜೂರಾದ ಐದು ಜಮೀನುಗಳಲ್ಲಿ ನನ್ನ ಹೆಸರು ದಾಖಲಾಗಿಲ್ಲ ಸಾಕ್ಷಿಯು ನನ್ನ ತಂದೆಯ ಹೆಸರು ದಾಖಲಾಗಿದೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳ ಉತಾರನಲ್ಲಿ ದಾವಾ ಹಾಕುವ ಕಾಲಕ್ಕೂ ನನ್ನ ತಂದೆಯ ಹೆಸರು ನಮೂದು ಇರಲಿಲ್ಲ ಎಂದರೆ ಸರಿಯಲ್ಲ.

**11]** ನನ್ನ ತಂದೆ ಇಬ್ಬರು ಹೆಂಡತಿಯರು ಮತ್ತು ಆರು ಜನ ಹೆಣ್ಣು ಮಕ್ಕಳು ಇರುವ ಕಾರಣ ಅವರ ಮದುವೆ ಮಾಡಲು ಕುಟುಂಬ ನಿರ್ವಹಣೆಗಾಗಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ದಿಃ **10-11-1999** ರಂದು ಕಾಡಪ್ಪ ಈಶ್ವರಪ್ಪ ಅಮ್ಮಣಗಿ ಹಾಗೂ ಬಸಗೌಡ ಈಶ್ವರ ಅಮ್ಮಣಗಿ ಇವರಿಂದ ರೂ.**1,66,000/-** ಹಣ ಪಡೆದು ತನ್ನ **1/5** ಹಿಸ್ಸೆಯನ್ನು ಮತ್ತು ಬಾಂವಿಯಲ್ಲಿ ನೀರು ತೆಗೆದುಕೊಳ್ಳುವ ಮತ್ತು ಬಾಂವಿಗೆ ಜೋಡಿಸಿದ ಪೈಪ ಲೈನಗಳಲ್ಲಿ ಹಕ್ಕನ್ನು ಜೊತೆಗೆ ಪಂಪ ಸಟ್ಟ ಮೇಲಿನ ಹಕ್ಕನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನಮ್ಮ ಹಿಸ್ಸಗೆ ಬಂಧನಕಾರಿಯಾಗುವುದಿಲ್ಲ ಎಂದು ಪರಿಹಾರ ಕೇಳಿಲ್ಲ. ಸದರಿ ಖರೀದಿ ಪತ್ರದನ್ವಯ ನನ್ನ ತಂದೆಯ ಹೆಸರು ಕಡಿಮೆಯಾಗಿ ಕಾಡಪ್ಪ ಈಶ್ವರಪ್ಪ ಅಮ್ಮಣಗಿ ಹಾಗೂ ಬಸಗೌಡ ಈಶ್ವರ ಅಮ್ಮಣಗಿ ಇವರ ಹೆಸರು ಉತಾರಿನಲ್ಲಿ ನಮುದಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಈಗ ಖರೀದಿಮಾಡಿದವರು ಹಸರಿನಲ್ಲಿ ಹಾಗೂ ಕಬಜಾದಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆಯವರು **1999** ರಲ್ಲಿ ಸದರಿ ಜಮೀನಿನಲ್ಲಿ ನನ್ನ **1/5** ಹಿಸ್ಸೆಯನ್ನು ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **1999** ರಿಂದ ಇವತ್ತಿನವರೆಗೂ ನನ್ನ ತಂದೆಯ ಹೆಸರು ಉತಾರಿನಲ್ಲಿ ದಾಖಲಾಗಿಲ್ಲ ಎನ್ನುವ ವಿಚಾರ ನನಗೆ ಗೊತ್ತಿಲ್ಲ.

12] ನನ್ನ ಅಜ್ಜ ಗೊಳಪ್ಪ ತನ್ನ ನಾಲ್ಕು ಜನ ಸಹೋದರೊಂದಿಗೆ ಅವರ ಹಿರಿಯರಿಂದ ಬಂದ ಸ್ವತ್ತುಗಳನ್ನು ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಪ್ರಕಾರ ಪೂರ್ವ ಪಶ್ಚಿಮಾಬಿಮುಖವಾಗಿ ಹಂಚಿಕೊಂಡಿದ್ದಾರೆ ಎಂದರೆ ಸರಿ. ಆ ಪ್ರಕಾರ ಅವರು ತಮ್ಮ ತಮ್ಮ ಹಿಸ್ಸಗೆ ಬಂದ ಸ್ವತ್ತುಗಳನ್ನು ಕಬಜಾ ವಹಿವಾಟು ಹೊಂದಿದ್ದಾರೆ ಎಂದರೆ ಸರಿ. ಈರಪ್ಪನ ಐದು ಜನ ಮಕ್ಕಳು ಮರಣ ಹೊಂದಿದ ನಂತರ ಅವರ ವಾರಸುದಾರರು ವಾರಸ ಪ್ರಕಾರ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆ ಬದುಕಿರುವಾಗ ರಿ ಸ ನಂಬರ 168 ಜಮೀನನ್ನು ಮೊದಲು ರಾಮಗೌಡಾ ನೇರ್ಲಿ ಇವರಿಗೆ ಮಾರಾಟ ಮಾಡಿದ್ದು , ತರುವಾಯ ಸದರಿ ರಾಮಗೌಡಾ ಬಸಗೌಡಾ ರಾಮಪ್ಪ ಅಮ್ಮಣಗಿ ಇವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ರಿ ಸ ನಂಬರ 115 ಜಮೀನ್ನು ಲಿಂಗಪ್ಪ ಅಮ್ಮಣಗಿ ಹಾಗೂ ಗೊಳಪ್ಪ ಮಲ್ಲಪ್ಪ ಅಮ್ಮಣಗಿ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ರಿ ಸ ನಂಬರ 176 ಹಾಗೂ 586 ರ ಜಮೀನನ್ನು ಬಸಗೌಡಾ ಅಣ್ಣಪ್ಪ ಅಮ್ಮಣಗಿ ಎನ್ನುವರಿಗೆ ಮಾರಾಟ ಮಾಡಿದ್ದರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವ ನಾಲ್ಕು ಜಮೀನುಗಳು ಖರೀದಿ ಮಾಡಿದ ವ್ಯಕ್ತಿಗಳ ಕಬಜಾ ವಹಿವಾಟಿನಲ್ಲಿ ಇದೆ ಎಂದರೆ ಸರಿಯಲ್ಲ. ಈ ಎಲ್ಲಾ ಸ್ವತ್ತುಗಳನ್ನು ನನ್ನ ತಂದೆಯವರು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13] ಖರೀದಿ ಮಾಡಿದ ವ್ಯಕ್ತಿಗಳ ಹೆಸರು ಉತಾರನಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ವ್ಯಕ್ತಿಗಳು ಪೈಪ ಲೈನ ಹಾಕಿ ಸಾಕಷ್ಟು ಸುದಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಹಾಗೇ ಸುದಾರಣೆ ಮಾಡಲು ಖರೀದಿ ಮಾಡಿದ ವ್ಯಕ್ತಿಗಳು ತಲಾ ರೂ.5 ಲಕ್ಷ ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತಾರೆ ಎಂದರೆ ಸರಿ , ಸಾಕ್ಷಿಯು ಕಬ್ಬಿನ ಜೊತೆ ಗೋವಿನ ಜೋಳ ಬೆಳೆಯುತ್ತಾರೆ ಎಂದು ಹೇಳುತ್ತಾರೆ. ಹಾಗೇ ಬೆಳೆದ ಕಬ್ಬನ್ನು ತಮ್ಮ ಹೆಸರಿನಲ್ಲಿ ಕಾರ್ಖಾನೆಗೆ ಹೊಡೆಯುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಕಬ್ಬು ಹೋಗುತ್ತದೆ ಎಂದು ಹೇಳುತ್ತಾರೆ. ರಿ ಸ ನಂಬರ 583/1 , 583/2 , 583/3 ಮತ್ತು 583/4 ಜಮೀನುಗಳಲ್ಲಿ ಬೆಳೆದ ಕಬ್ಬನ್ನು 1999 ರಿಂದ ಇಲ್ಲಿಯವರೆಗೂ ನನ್ನ ತಂದೆಯ ಹೆಸರಿಗೆ ಕಾರ್ಖಾನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳ ಕುರಿತು ನನ್ನ ತಂದೆಯ ಹೆಸರಿನಲ್ಲಿ ಕಬ್ಬು ಹೋಗಿದೆ ಎಂದು ತೋರಿಸುವ ದಾಖಲಗಳನ್ನು ಹಾಜರು ಪಡಿಸಿದ್ದೇನೆ. ನನ್ನ ತಂದೆಯ ಹೆಸರಿನಲ್ಲಿ 1999 ರಿಂದ ಇಲ್ಲಿಯವರೆಗೆ ಕಬ್ಬು ಕಾರ್ಖಾನೆಗೆ ಹೋಗದ ಕಾರಣ ಯಾವದೇ ದಾಖಲೆ ಹಾಜರು ಪಡಿಸಲುಯಾಗಿಲ್ಲ ಎಂದರೆ ಸರಿಯಲ್ಲ. ಸದರಿ ನಾಲ್ಕು ಜಮೀನುಗಳ ಕುರಿತು ನನ್ನ ತಂದೆ 1999 ರಿಂದ ತಾನು ಸಾಯುವರೆಗೆ ಯಾವದೇ ಹಣಕಾಸು ಸಂಸ್ಥೆಗಳಿಂದ ಸಾಲ ವಗೈರೆ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದ ವ್ಯಕ್ತಿಗಳು ಸಾಲ ಪಡೆದ ಕಾರಣ ಅವರ ಹೆಸರು ಉತಾರಿನಲ್ಲಿ ದಾಲಾಗಿದೆ ಎಂದರೆ ಸರಿಯಲ್ಲ. ನನ್ನ

ತಂದೆಯವರು ಮಾರಾಟ ಮಾಡಿದ ಜಮೀನುಗಳ ಕುರಿತು ನನಗೆ ಸ್ಪಷ್ಟವಾದ ಮಾಹಿತಿ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ವ್ಯಕ್ತಿಗಳ ಹೆಸರು ಸಂಬಂಧಿಸಿದ ಉತಾರಗಳಲ್ಲಿ ನಮೂದು ಇರುವುದನ್ನು ನೀವು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ಕಾರಣ ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. ಎಲ್ಲಾ ಸ್ವತ್ತುಗಳಲ್ಲಿ ನನಗೆ 1/5 ಹಿಸ್ಸೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14] ನನ್ನ ತಂದೆ ಗುಡಸ ಗ್ರಾಮದಲ್ಲಿ ಒಳ್ಳೆ ವ್ಯಕ್ತಿ ಎಂದರೆ ಸರಿ. ಆದ್ದರಿಂದ ತನ್ನ ಕುಟುಂಬ ನಿರ್ವಹಣೆಗಾಗಿ ತನಗೆ ಸೇರಿದ ಸ್ವತ್ತುಗಳನ್ನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ.

ಶ್ರೀ ಎ ಎಮ್ ಎಚ್ ವಕೀಲರು ಉಳಿದಂತೆ 9 ನೇ ಪ್ರತಿವಾದಿಯ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ. ಅನುಮತಿ ನೀಡಿದೆ.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಐ ಕೆ ಎಚ್ ವಕೀಲರಿಂದಃ

15] 1 ನೇ ಪ್ರತಿವಾದಿ ತನ್ನ ಹಿಸ್ಸಗೆ ಬಂದ ಸ್ವತ್ತುಗಳನ್ನು ಪ್ರತ್ಯಕ ಕಬಜಾ ವಹಿವಾಟು ಹೊಂದಿದ್ದಾನೆ ಎಂದರೆ ಸರಿಯಲ್ಲ. ಆ ಪ್ರಕಾರ 1 ನೇ ಪ್ರತಿವಾದಿ ತನ್ನ ಹಿಸ್ಸೆ ಬಂದ ಸ್ವತ್ತುಗಳನ್ನು ಹೊಳೆಯಿಂದ ಪೈಪ ಲೈನ ಮಾಡಿಸಿ ಅಭಿವೃದ್ಧಿ ಪಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬೆಳೆದ ಕಬ್ಬನ್ನು ತನ್ನ ಹೆಸರಿನಲ್ಲಿ ಕಾರ್ಖಾನೆಗೆ ಹೊಡೆಯುತ್ತಾನೆ ಎಂದರೆ ಸರಿ.

ಶ್ರೀ ಐ ಕೆ ಎಚ್ ವಕೀಲರು ಉಳಿದಂತೆ ಪ್ರತಿವಾದಿ ನಂ.4 ರಿಂದ 6 ಹಾಗೂ ಪ್ರತಿವಾದಿ ನಂ. 9 ರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ. ಅನುಮತಿ ನೀಡಿದೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ

*PW -1 present. Sri. PRC adv for the Defendant No.9 permitted to cross examination. Sri. AMH adv for the Defendant No.4 to 7 present and permitted to cross examination. Sri. AMH adv further adopt the cross examination done for Defendant No.9. Heard and permitted. Sri. IKH adv for the Defendant No.1 present and permitted to cross examination. Sri. IKH further adopt the cross examination done for Defendant No.4 to 7 and Defendant No.9. Heard and permitted.*

*PW-1 fully examined.*

*Sri. MSH adv prays time for further plaintiff evidence by 24-02-2020.*

*Senior Civil Judge Hukkeri.*